ಆಚೆಗೆ ಹೋಗೋದು ಅಮ್ಮನಿಗೆ ಇಷ್ಟವಿಲ್ಲ. ಅದರೊಂದಿಗೆ ಈಗ ರಾನಾ ಯಾಕೆ ಹೋಗಿದ್ದಾನೆ ಅಂತ ಗೊತ್ತಾದರಂತೂ ಅದನ್ನು ಹೇಳೋ ಹಾಗೆ ಇಲ್ಲ, ಅಯ್ಯೋ ಏನಾಗುತ್ತೆ ಈಗ?

ರಾನಾಗೆ ಏನೋ ಹುಚ್ಚು ಹಿಡಕೊಂಡಿದೆ. ಬಾಬಾ ದೇಶ ಬಿಟ್ಟು ಹೋಗಿ ಆರು ತಿಂಗಳಾಗಿರಬೇಕು. ಹೋಗೋ ಮೊದಲು ಒಂದ್ಸಲ ಹೇಳಿ ಹೋಗುವ ಅವಕಾಶ ಆಗಲಿಲ್ಲ. ಎಲ್ಲ ದಿನಗಳಂತೆ ಆ ದಿನವೂ ಸ್ಕೂಲ್ ಗೇಟ್ ಎದುರು ಬಾಬಾ ನಿಂತ್ಕೊಂಡಿದ್ದ. ಸ್ಕೂಲು ಮುಗಿದ ಮೇಲೆ ಗೇಟ್ ಹತ್ತಿರ ರಾಕಾ ರಾನಾ ಬಂದಿದ್ದೇ ತಡ ಬಾಬಾನೂ ಮುಂದೆ ಬಂದಿದ್ದ. ರಾಕಾ ಸ್ವಲ್ಪ ಹಿಂಜರಿಯುತ್ತಾ ನಿಂತಿದ್ದಳು, ಆದರೆ ರಾನಾ ಒಂದೇ ಏಟಿಗೆ ಬಾಬಾ ಹತ್ತಿರ ಓಡಲು ತಯಾರಾಗಿದ್ದ.

ಹೋಗಲಿಲ್ಲ. ಮಧ್ಯೆ ಅಮ್ಮ ಬಂದು ನಿಂತಿದ್ದಳು.

ಅಮ್ಮನ ಜೊತೆ ದಿನಾ ಅಕ್ಕತಮ್ಮ ರಿಕ್ಷಾದಲ್ಲಿ ಮನೆಗೆ ಬರುತ್ತಾರೆ. ಆ ದಿನವೂ ಅಮ್ಮ ಅವರನ್ನು ಕರೆದುಕೊಂಡು ಹೋಗಲು ಬಂದಿದ್ದಳು. ರಾನಾನನ್ನು ಬಾಬಾ ಹತ್ತಿರ ಹೋಗಲು ಬಿಡಲಿಲ್ಲ ಅಮ್ಮ, ಬದಲು ಅವರನ್ನು ರಿಕ್ಷಾದಲ್ಲಿ ಕೂರಿಸಿ ಬಾಬಾನ ಜೊತೆ ಮುಂಬಾ ಮಾಮ ಟೀ ಸ್ಟಾಲ್ ಎದುರು ನಿಂತು ಜಗಳ ಆಡಿ ಬಂದಿದ್ದಳು. ಮನೆಗೆ ಬಂದ ಮೇಲೆ ರಾನಾ ಅಳ್ತಾ ಇರೋದನ್ನು ನೋಡಿ ಅವನ ಬೆನ್ನ ಮೇಲೆ ಎರಡೇಟು ಗುದ್ದಿದ್ದಳು ಅಮ್ಮ.

ಹಲ್ಲು ಕಡೀತಾ ಹೇಳಿದ್ದಳು, "ನಾಚಿಕೆಯಾಗೋಲ್ವಾ, ಅಂಥ ವ್ಯಕ್ತಿಗೋಸ್ಕರ ಕಣ್ಣೀರು ಸುರಿಸೋಕೆ! ಬೇಜವಾಬ್ದಾರಿ, ಅಡಾವುಡಿ ಅವನು!"

"ಬಾಬಾ ಅಲ್ಲ, ನೀನು" ಅಳ್ತಾ ಅಳ್ತಾ ಹೇಳಿದ ರಾನಾ ಆ ದಿನ ಚೆನ್ನಾಗಿ ಒದೆ ತಿಂದ. ಅಮ್ಮನಿಗೆ ಎಷ್ಟು ಕೋಪ ಬಂದಿತ್ತು ಅಂದ್ರೆ, ಮಧ್ಯೆ ಸೈಫುಲ್ ಅಂಕಲ್ ಬಂದು ಬಿಡಿಸದಿದ್ದರೆ ರಕ್ತ ಹರೀತಿತ್ತೇನೋ!

ಇತ್ತೀಚೆಗೆ ಮಲಗುವ ಮೊದಲು ದಿನಾ ರಾತ್ರಿ ರಾನಾ ಬಹಳ ಹಟವಾದಿಯಂತೆ ಹೂಂಕರಿಸುತ್ತಾನೆ. "ನೋಡು ದೀದಿ, ಒಂದಿನ ನಾನು ಬಾಬಾ ಹತ್ತಿರ ಹೋಗೇ ಹೋಗ್ತೀನಿ."

"ನಿನಗೆ ಗೊತ್ತಾ ಬಾಬಾ ಎಲ್ಲಿ ಹೋಗಿದ್ದಾನೆ ಅಂತ?"

"ನಾನು ಸುದ್ದಿ ಹುಡುಕಿದಿನಿ, ಬಾಬಾ ಬರ್ಮಿಂಗ್ ಹ್ಯಾಮ್‌ನಲ್ಲಿ ಇದ್ದಾನಂತೆ. ಅದು ಎಲ್ಲಿದೆ ದೀದಿ?"

"ಲಂಡನ್‌ನಲ್ಲಿ. ಅಲ್ಲ, ಲಂಡನ್ ಅಲ್ಲ, ಲಂಡನ್ನಿಂದ ನೂರಿನ್ನೂರು ಮೈಲಿ ದೂರದಲ್ಲಿರೋ ಮತ್ತೊಂದು ಚಿಕ್ಕ ಸಿಟಿ. ಗೊತ್ತಾ? ನಾವು ಕ್ಯಾಡ್ಬರೀಸ್ ಚಾಕೊಲೇಟ್ ತಿಂತೀವಲ್ಲಾ, ಅದನ್ನು ಅಲ್ಲೇ ಮಾಡ್ತಾರೆ!"

ಬೇರೆ ದಿನವಾಗಿದ್ರೆ ರಾನಾ ಕ್ಯಾಡ್ಬರಿ ಹೆಸರು ಕೇಳಿದ್ರೆ ಸಾಕು ಕುಣೀತಾ ಇರ್ತಿದ್ದ. ಆದರೆ, ಅವನು ಆ ದಿನ ಬಹಳ ವಿಷಣ್ಣನಾಗಿದ್ದ.

"ಲಂಡನ್ ಆಗಿದ್ರೆ ಪರವಾಗಿರಲಿಲ್ಲ, ಆದ್ರೆ ಬೇರೆ ಯಾವುದೋ ಊರು, ಅಲ್ಲಿ ಹೇಗೆ ಬಾಬಾನನ್ನು ಹುಡುಕೋದು..."

"ಹೇ ದಡ್ಡ, ಪರದೇಶಾಂದ್ರೆ ನಮ್ಮ ದೇಶದ ಥರನಾ? ಅಲ್ಲಿ ನೂರಿನ್ನೂರು ಮೈಲು ಅನ್ನೋದು ಏನೂ ಅಲ್ಲ. ದಿನಾ ಜನ ಬರ್ಮಿಂಗ್ ಹ್ಯಾಮ್‌ನಿಂದ ಲಂಡನ್‌ಗೆ ಕೆಲಸಕ್ಕೆ ಹೋಗಿ ಬರ್ತಾರಂತೆ."

"ಓ ಹಂಗಾದ್ರೆ ಒಳ್ಳೇದಾಯ್ತು, ಒಂದಿನ..."

"ಏನು? ಒಂದಿನ ಏನು?"

"ಏರೋಪ್ಲೇನಲ್ಲಿ ಹೋಗೋಕಾಗಲ್ಲ, ದುಡ್ಡು ಜಾಸ್ತಿ ಅಂತಲ್ಲ, ಅಲ್ಲಿ ಏನೇನೋ ರೂಲ್ಸು. ಅವಕಾಶ ಸಿಕ್ರೆ ಇಲ್ಲಿಂದ ಚಾಟ್ಗಾ (ಬಂದರಿನ ಹೆಸರು), ಅಲ್ಲಿಂದ

